



ಕಾಣುತ್ತದೆ. ಫ್ರೆಂಚ್ ಮಾದರಿಯ ಕೇಶ ಶೈಲಿ ಕೂಡ ಉದ್ದ ಕೂದಲಿನವರಿಗೆ ಚೆನ್ನಾಗಿ ಒಪ್ಪುತ್ತದೆ. ನೀಳಕೂದಲನ್ನು ಎಳೆ ಎಳೆಯಾಗಿ ಬಿಡಿಸಿ ಹೆಣೆದು ಮಾಡುವ ಕೇಶ ವಿನ್ಯಾಸ ಇಡೀ ದಿನ ಎಷ್ಟೇ ಚಟುವಟಿಕೆಗಳಲ್ಲಿ ತೊಡಗಿದ್ದರೂ ಅಲ್ಲಾಡದೆ ಹಾಗೇ ಇರುತ್ತದೆ.

ಇದೀಗ ಹಲವಾರು ವೈವಿಧ್ಯಮಯ ಕ್ಲಿಪ್‌ಗಳು ಲಭ್ಯ. ಫ್ಯಾಷನೆಬಲ್ ಆಗಿರುವ ಇಂಥ ಕ್ಲಿಪ್, ಹೇರ್‌ಪಿನ್‌ಗಳು ಕೇಶ ವಿನ್ಯಾಸವನ್ನು ಸರಾಗ ಹಾಗೂ ಸರಳಗೊಳಿಸುತ್ತವೆ. ಕೂದಲು ಆರೋಗ್ಯವಂತವಾಗಿರಬೇಕು. ತಲೆಹೊಟ್ಟು, ಕವಲು ಕೂದಲು, ಸೀಳು ಕೂದಲು, ಒರಟು ಕೂದಲು ಮುಂತಾದ ಸಮಸ್ಯೆಗಳಿಂದ ಮುಕ್ತವಾದರೆ ಅಂಥ ಹೆಣ್ಣುಮಗಳ ಕೇಶ ಶೈಲಿಯನ್ನೂ ಚೆನ್ನಾಗಿ ಮಾಡಬಹುದು.

ಬಿಸಿಲು, ಮಳೆ, ಧೂಳು, ಚಳಿಗೆ ಕೂದಲಿನ ಆರೋಗ್ಯವೂ ಹದಗೆಡುತ್ತದೆ. ದೇಹದ ಆರೋಗ್ಯ ಏರುಪೇರು ಆಗುವಂತೆ ಕೂದಲೂ ಕೂಡ ಅಂದಗೆಡುತ್ತದೆ. ಕೂದಲಿನ ಬುಡ ಸೂಕ್ಷ್ಮವಾಗಿರುವುದರಿಂದ ಅದರ ಆರೈಕೆಯನ್ನೂ ಸರಿಯಾಗಿ ಮಾಡಬೇಕಾಗುತ್ತದೆ. ಆರೋಗ್ಯವಂತ ಕೂದಲಿನ ವಿನ್ಯಾಸ ನೋಡುಗರ ಗಮನಸೆಳೆಯುತ್ತದೆ.

ಕೂದಲಿಗೆ ಹೆನ್ನಾ ಅಥವಾ ಮೆಹೆಂದಿ ಹಚ್ಚಿದರೆ ಕೂದಲು ಹೊಳೆಯುತ್ತದೆ, ನುಣುಪಾಗುತ್ತದೆ, ಸೊಂಪಾಗಿ ಬೆಳೆಯುತ್ತದೆ,ಆರೋಗ್ಯಪೂರ್ಣವಾಗಿರುತ್ತದೆ ಎಂಬುದು ಸಾಮಾನ್ಯವಾಗಿ ಎಲ್ಲರ ನಂಬಿಕೆ. ಆದರೆ ರಾಸಾಯನಿಕವುಳ್ಳ ಹೆನ್ನಾ ಕೂಡ ಕೂದಲಿಗೆ ಅಪಾಯಕಾರಿಯೇ.

## ಹೊಸ ವಿನ್ಯಾಸದ ನಿರೀಕ್ಷೆಯಲ್ಲಿ..

ಕಾಲ ಕಾಲಕ್ಕೆ ಕೂದಲ ವಿನ್ಯಾಸ ಬದಲಿಸಿಕೊಂಡು ಹೊಸ ಹೊಸ ಕೇಶಶೈಲಿಗೆ ಮಾರು ಹೋಗುವುದು ಫ್ಯಾಷನ್‌ಪ್ರಿಯರ ಹವ್ಯಾಸ. ಆದರೆ ಕೆಲವರು ಒಂದೇ ರೀತಿಯ ಕೇಶಶೈಲಿಯನ್ನು ಸದಾ ಉಳಿಸಿಕೊಂಡಿರುತ್ತಾರೆ. ಆದರೆ ಫ್ಯಾಷನ್‌ಪ್ರಿಯರಿಗೆ ಇದು ಸಾಧ್ಯವಿಲ್ಲದ ಮಾತು. ಪ್ರತಿ ಬಾರಿ ಹೇರ್‌ಟ್ರಿಮ್ ಮಾಡುವಾಗಲೂ ಪಾರ್ಲರ್ ಒಡತಿಗೆ ಕೇಳುವ ಪ್ರಶ್ನೆ, 'ಹೊಸ ಹೇರ್‌ಸ್ಟೈಲ್ ಯಾವುದಿದೆಯೋ ಅದನ್ನೇ ಮಾಡಿ' ಎಂದು.

ಇನ್ನೇನು ಹೊಸ ವರ್ಷ ಸಮೀಪಿಸುತ್ತಿದೆ. ಹೊಸ ವರ್ಷಕ್ಕೆ ಹೊಸ ರೀತಿಯ ಕೇಶವಿನ್ಯಾಸ ಮಾಡಿಸಿಕೊಳ್ಳಬೇಕು ಎಂಬುದನ್ನು ಫ್ಯಾಷನ್‌ಪ್ರಿಯ ಯುವತಿಯರು ಈಗಲೇ ಪ್ಲ್ಯಾನ್ ಮಾಡಿರಬಹುದು. ಕೇಶವಿನ್ಯಾಸಗಾರರು ಕೂಡ ಹೊಸ ಬಗೆಯ, ಫ್ಯಾಷನೆಬಲ್ ಆಗಿ ಕಾಣುವ ಕೇಶ ವಿನ್ಯಾಸ ಮಾಡಲು ಸಾಕಷ್ಟು ಅಧ್ಯಯನ, ತಯಾರಿ ನಡೆಸುತ್ತಲೇ ಇದ್ದಾರೆ. ಕೆಲವು ಮಹಿಳೆಯರು ಸಿನಿಮಾ ನಟಿಯರ ಕೇಶ ಶೈಲಿಯನ್ನೇ ಅನುಕರಿಸುತ್ತಾರೆ. ಅವರಂತೆ ತಾವೂ ಕಾಣಬೇಕು ಎಂಬ ತುಡಿತ ಇಲ್ಲಿ ಎದ್ದು ಕಾಣುತ್ತದೆ.

ಫ್ಯಾಷನ್ ಶೋಗಳಲ್ಲಿ ಕ್ಯಾಟ್ ವಾಕ್ ಮಾಡುವ ಮಾಡೆಲ್‌ಗಳು ತರಹೇವಾರಿ ವಿನ್ಯಾಸದ ಕೇಶ ಶೈಲಿಯನ್ನು ಮಾಡಿಸಿಕೊಂಡಿರುತ್ತಾರೆ. ರೂಪ, ನೋಟ, ಒಡವೆ, ಉಡುಪುಗಳಷ್ಟೇ ಕೇಶ ವಿನ್ಯಾಸಕ್ಕೂ ಅಲ್ಲಿ ಆದ್ಯತೆ ನೀಡಲಾಗುತ್ತದೆ. ಮಾಡೆಲ್‌ಗಳ ಕೇಶರಾಶಿ ಕ್ಯಾಟ್‌ವಾಕ್ ಮಾಡುವಾಗ ನೋಡುಗರ ಗಮನ ಸೆಳೆಯುವ ಕಾರಣ ವಿನ್ಯಾಸಕ್ಕೂ ವಿಶೇಷ ಮುತುವರ್ಜಿ ವಹಿಸಿರುತ್ತಾರೆ.

## ಕೂದಲು ಉದುರುವಿಕೆ ಆತಂಕ

ಇಂದಿನ ವೇಗದ ಯುಗದಲ್ಲಿ ಯುವಜನರು ಅಧಿಕ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾರೆ. ಇದು ಕೂದಲ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ.

ಅಧಿಕ ಒತ್ತಡದಿಂದ 25 ರಿಂದ 35 ರ ವಯೋಮಾನದ ಶೇ. 85 ರಷ್ಟು ಯುವಕ ಮತ್ತು ಯುವತಿಯರು ಕೂದಲು ಉದುರುವಿಕೆಯಿಂದ ಬಳಲುತ್ತಿದ್ದಾರೆ ಎಂಬ ಆಘಾತಕಾರಿ ಅಂಶವನ್ನು ಹೇರ್‌ಲೈನ್ ಇಂಟರ್‌ನ್ಯಾಷನಲ್ ರಿಸರ್ಚ್ ಸೆಂಟರ್ ಈಚೆಗೆ ನಡೆಸಿದ ಸಮೀಕ್ಷೆಯಲ್ಲಿ ಹೊರಗೆಡವಿದೆ. ಈ ಸಂಸ್ಥೆ 2014ರಿಂದ 2016ರವರೆಗೆ ಎರಡು ವರ್ಷಗಳ ಅವಧಿಯಲ್ಲಿ ಈ ಸಮೀಕ್ಷೆ ನಡೆಸಿ ಬೆಂಗಳೂರಿನಲ್ಲಿರುವ ಆರು ಘಟಕಗಳಲ್ಲಿ ಅಧ್ಯಯನ ನಡೆಸಿದೆ. ತಲೆಕೂದಲ ಸಮಸ್ಯೆಯಿಂದ ಬಳಲುವ ಸುಮಾರು ಒಂದು ಸಾವಿರ ಮಂದಿಯನ್ನು ಎರಡು ವರ್ಷಗಳ ಅವಧಿಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಲ್ಲಿ ಶೇ80ರಷ್ಟು ಮಂದಿ (ಯುವಕ–ಯುವತಿಯರು) ಕೂದಲು ಉದುರುವಿಕೆ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂಬುದು ಬೆಳಕಿಗೆ ಬಂದಿದೆ.